ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

15

ಇಲಾಖೆ / ವಿಷಯ : DEPARTMENT / SUBJECT: ಉಪ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE: 12/4/21

# ಮಸ್ಕಿ ಬಿಜೆಪಿ ಅಭ್ಯರ್ಥಿಗೆ ಕೊರೊನಾ ಸೋಂಕು

12/4/21

**ರಾಯಚೂರು:** ಮಸ್ಕಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ್‌ಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಪಕ್ಷದ ವಲಯದಲ್ಲಿ ಆತಂಕಕ್ಕೆ ಕಾರಣವಾಗಿದೆ.



ತಮಗೆ ಸೋಂಕು ತಗುಲಿರುವ ಕುರಿತು ಖುದ್ದು ಸ್ಪಷ್ಟೀಕರಣ ನೀಡಿರುವ ಪ್ರತಾಪಗೌಡರು, ನಾನು ಹೋಂ ಕ್ವಾರಂಟೈನ್‌ಗೆ ಒಳಗಾಗಿದ್ದು, ಯಾರೂ ಸಂಪರ್ಕಕ್ಕೆ ಬರಬೇಡಿ ಎಂದು ವಿನಂತಿಸಿಕೊಂಡಿದ್ದಾರೆ.

**■ ಹೋಂ ಕ್ವಾರಂಟೈನ್‌ಗೆ ಒಳಗಾದ ಪ್ರತಾಪಗೌಡ ಪಾಟೀಲ್**

ಆದರೆ, ಶನಿವಾರ ವಷ್ಟೇ ಕ್ಷೇತ್ರದ ತುರುವಿಹಾಳನಲ್ಲಿ ಬಹಿರಂಗ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಸಿಎಂ ಯಡಿಯೂರಪ್ಪ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ ಸಿಂಗ್ ಸೇರಿದಂತೆ ಸಚಿವರು, ಶಾಸಕರು, ಪಕ್ಷದ ಮುಖಂಡರು ಭಾಗಿಯಾಗಿದ್ದರು. ಈ ವೇಳೆ ಅನೇಕರಿಗೆ ಹಸ್ತಲಾಘವ ಮಾಡಿದ್ದರೆ, ಕೆಲವರಿಗೆ ಆಲಿಂಗನ ಮಾಡಿದ್ದರಿಂದ ಎಲ್ಲರಲ್ಲೂ ಆತಂಕಕ್ಕೆ ಕಾರಣವಾಗಿದೆ. ಮಸ್ಕಿ ಚುನಾವಣೆಗೆ ಇನ್ನೂ ಐದು ದಿನ ಬಾಕಿಯಿದ್ದು, ಎಲ್ಲೆಡೆ ಪ್ರಚಾರ ಭರಾಟೆ ಜೋರಾಗಿದೆ. ಇಂಥ ವೇಳೆ ಸೋಂಕು ತಗುಲಿರುವುದು ಅವರ ಪ್ರಚಾರ ಕಾರ್ಯಕ್ಕೂ ತೊಡಕಾಗಿದೆ. ರವಿವಾರ ಮುದಗಲ್‌ನಲ್ಲಿ ಸಿಎಂ ನಡೆಸಿದ ಸರಣಿ ಸಭೆಯಲ್ಲೂ ಪ್ರತಾಪಗೌಡ ಪಾಲ್ಗೊಂಡಿರಲಿಲ್ಲ.